ಸಾಕ್ಷಿಯನ್ನು ದಿಃ **02.07.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರದೆ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಎ.ಎಸ್. ವಕೀಲರಿಂದಃ-

ನನಗೆ ಈಗ 52 ವರ್ಷ ವಯಸ್ಸು. ನನ್ನ ತಂದೆ ಚಂದ್ರೇಗೌಡರವರು ತೀರಿಕೊಂಡು ಈಗ್ಗೆ 5 ವರ್ಷವಾಯಿತು. ನನ್ನ ತಂದೆ ತೀರಿಕೊಂಡಾಗ ಅವರಿಗೆ ಎಷ್ಟು ವಯಸ್ಸಾಗಿತ್ತು ಎಂದು ಗೊತ್ತಿಲ್ಲ. ನನ್ನ ತಂದೆ ಮತ್ತು ಶಿವಣ್ಣೆಗೌಡ ಅಣ್ಣ-ತಮ್ಮಂದಿರು. ನನ್ನ ದೊಡ್ಡಪ್ಪ ಶಿವಣ್ಣೇಗೌಡ ತೀರಿಕೊಂಡು 10 ವರ್ಷಕ್ಕೂ ಮೇಲಾಯಿತು. ಅವರು ತೀರಿಕೊಂಡಾಗ ಅವರಿಗೆ ಎಷ್ಟು ವಯಸ್ಸಾಗಿತ್ತು ಎಂದು ಗೊತ್ತಿಲ್ಲ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನ ತಂದೆಯ ಹೆಸರು ಸೋಮೇಗೌಡ ಎಂದರೆ ಸರಿಯಲ್ಲ, ಅವರ ಹೆಸರು ತಮ್ಮೇಗೌಡ. ನನ್ನ ತಂದೆ ಮತ್ತು ದೊಡ್ಡಪ್ಪ ತಮ್ಮೇಗೌಡರ ಮಕ್ಕಳು ಎಂದು ತೋರಿಸಲು ಹಕ್ಕು ಖುಲಾಸೆ ಪತ್ರ ಮತ್ತು ನೊಂದಾಯಿತ ದಾನ ಪತ್ರ ಹಾಜರುಪಡಿಸಿದ್ದೇನೆ. 1954ರಲ್ಲಿ ಸೋಮೇಗೌಡರವರು ಗೆಂಡೇಗೌಡರವರಿಗೆ ದಾನಪತ್ರ ಬರೆದುಕೊಟ್ಟಿದ್ದಾರೆ. ಗೆಂಡೇಗೌಡರು ಈ ದಾವೆಯಲ್ಲಿ ಪಕ್ಷಗಾರರಲ್ಲ. ಗೆಂಡೇಗೌಡರು ಸೋಮೇ ಗೌಡರ ದೊಡ್ಡಪ್ಪನ ಮಗ. ನನ್ನ ತಂದೆ ಮತ್ತು ದೊಡ್ಡಪ್ಪ ಸೋಮೇಗೌಡರಿಗೆ ದತ್ತು ಹೋಗಿದ್ದಾರೆ ಎಂದು ತೋರಿಸಲು ದತ್ತು ಪತ್ರ ಆಗಿಲ್ಲ. 1954ರಲ್ಲಿ ನನ್ನ ತಂದೆ ಮತ್ತು ದೊಡ್ಡಪ್ಪ ಸೋಮೇಗೌಡರಿಗೆ ದತ್ತು ಹೋದರು. 1954ರಲ್ಲಿ ದತ್ತು ಪತ್ರ ಚಾಲ್ತಿಯಲ್ಲಿರಲಿಲ್ಲ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ.

ನನ್ನ ಪ್ರತಿವಾದ ಪತ್ರವನ್ನು ಸಲ್ಲಿಸಲು 1ನೇ ಪ್ರತಿವಾದಿ ಮಾಹಿತಿ ಕೊಟ್ಟಿದ್ದಾರೆ. 1ನೇ ಪ್ರತಿವಾದಿ ತೀರಿಹೋಗಿದ್ದಾರೆ. ನನ್ನ ತಂದೆ ಮತ್ತು ದೊಡ್ಡಪ್ಪ ಸೋಮೇಗೌಡರಿಗೆ ದತ್ತು ಹೋಗಿದ್ದಾರೆ ಎಂದು ಪ್ರತಿವಾದ ಪತ್ರದಲ್ಲಿ ಬರೆಸಿ ಹಾಕಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು 1ನೇ ಪ್ರತಿವಾದಿಯೇ ಬರೆಸಿಹಾಕಿದ್ದಾರೆ. ಸಾಕ್ಷಿ ಮುಂದುವರೆದು ತಾನೇ ಹೇಳಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಮೇಲೆ ಹೇಳಿದ ವಿಷಯಗಳು ಬರೆಸಿದ್ದೀರಾ ಎಂದರೆ ಬರೆಸಿಲ್ಲ ಎಂದು ನುಡಿದು ಸಾಕ್ಷಿಯು ಪುನಃ ಬರೆಸಿದ್ದೇನೆ ಎಂದು ನುಡಿಯುತ್ತಾರೆ.

ನಮ್ಮ ಕುಟುಂಬದ ದಾಖಲೆಗಳನ್ನು ಸೋಮೇಗೌಡರು ಇಟ್ಟುಕೊಂಡಿರುತ್ತಾರೆ. ಸೋಮೇಗೌಡರ ಮರಣಾನಂತರ ದಾಖಲೆಗಳು ಕೆಂಪರಾಜೇಗೌಡರ ಬಳಿ ಇತ್ತು. ಕೆಂಪರಾಜೇ ಗೌಡರು ನನ್ನ ದೊಡ್ಡಪ್ಪನಾದ 2ನೇ ಪ್ರತಿವಾದಿಯ ಮಗ. ಮನೆಗೆ ಸೇರಿದ ಪತ್ರಗಳು ಕೆಂಪರಾಜೇಗೌಡರ ಕೈಯಲ್ಲಿತ್ತು ಎಂದರೆ ಅವರ ಕೈಯಲ್ಲಿಯೂ ಇತ್ತು, ಬೇರೆ ಬೇರೆಯವರ ಕೈಯಲ್ಲಿಯೂ ಇತ್ತು. ನಾನು ಹೇಳುವ ಕೆಂಪರಾಜೇಗೌಡರು ಈ ದಾವೆಯ 2ನೇ ಪ್ರತಿವಾದಿ ಎಂದರೆ ಸರಿ. 2ನೇ ಪ್ರತಿವಾದಿಯೂ ಕೂಡ ಪ್ರತಿವಾದಿ ಪತ್ರಕ್ಕೆ ನನ್ನ ಜೊತೆ ಸಹಿ ಹಾಕದ್ದಾರೆ. 2ನೇ ಪ್ರತಿವಾದಿ ಮೇಲೆ ಹೇಳಿದ ವಿಷಯಗಳನ್ನು ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಬರೆಸಿದ್ದಾರೆ.

ತಮ್ಮಣ್ಣೇಗೌಡರಿಗೆ ಇಬ್ಬರು ಹೆಂಡತಿಯರಿದ್ದು, 2ನೇ ಪತ್ನಿಯ ಹೆಸರು ನಾಚೇರಮ್ಮ ಎಂದು ಪ್ರತಿವಾದ ಪತ್ರ ನನ್ನ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ನಿಡಿ-33ರ ದಾಖಲೆಯನ್ನು ಹಾಜರುಪಡಿಸಿ ತಮ್ಮಣ್ಣೇಗೌಡರಿಗೆ ಇಬ್ಬರು ಹೆಂಡತಿಯರು, ಎರಡನೇ ಪತ್ನಿಯ ಹೆಸರು ನಾಚೇರಮ್ಮ ಎಂದು ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. ತಮ್ಮಣ್ಣೇಗೌಡರಿಗೆ ಇಬ್ಬರು ಹೆಂಡತಿಯರು ಇದ್ದರು ಎಂಬ ವಿಷಯ 1ನೇ ಪ್ರತಿವಾದಿಗೆ ಗೊತ್ತಿತ್ತು. ಆ ಬಗ್ಗೆ ಅವರ ಪ್ರತಿವಾದ ಪತ್ರದಲ್ಲಿ ಬರೆಸಿದ್ದಾರಾ ಎಂದರೆ ಗೊತ್ತಿಲ್ಲ.

ನಿಡಿ-33ರ ದಾಖಲೆಯನ್ನು ದಿನಾಂಕ 27.03.1952ರಲ್ಲಿ ಬರೆದಿದ್ದಾರೆ. ನಾಚೇರಮ್ಮ ಯಾವ ತಾರೀಖಿನಂದು ತೀರಿಕೊಂಡರು ಎಂದು ಗೊತ್ತಿಲ್ಲ. ನನ್ನ ತಂದೆ ಮತ್ತು ದೊಡ್ಡಪ್ಪ ಯಾವ ತಾರೀಖಿನಂದು ತೀರಿಕೊಂಡರು ಎಂದು ನೆನಪಿಲ್ಲ. ನಿಡಿ-33ರ ಪತ್ರವನ್ನು ಎಲ್ಲಿ ಬರೆಯಲಾಗಿದೆ ಎಂದು ನನಗೆ ವೈಯುಕ್ತಿಕವಾಗಿ ಗೊತ್ತಿಲ್ಲ. ಆದರೆ ಬನ್ನಿಕುಪ್ಪೆ ಪಂಚಾಯತಿಯಲ್ಲಿ ಬರೆಯಲಾಗಿದೆ ಎಂದು ತಾತ ಸೋಮೇಗೌಡ ಹೇಳುತ್ತಿದ್ದರು. ಅವರು ತೀರಿಕೊಳ್ಳುವ ಪೂರ್ವದಲ್ಲಿ ನನಗೆ ಈ ವಿಷಯ ಹೇಳಿದ್ದಾರೆ. ಸೋಮೇಗೌಡರು ಯಾವಾಗ ತೀರಿಕೊಂಡರು ಎಂದು ದಿನಾಂಕ ಗೊತ್ತಿಲ್ಲ. ನನ್ನ ತಾತ ಸೋಮೇಗೌಡರು ತೀರಿಕೊಂಡು ಸುಮಾರು 10 ವರ್ಷವಾಗಿದೆ. ನನ್ನ ತಾತ ತೀರಿಕೊಂಡ 6-7 ವರ್ಷಕ್ಕೆ ನನ್ನ ತಂದೆ ತೀರಿಕೊಂಡರು. ಆ 15 ವರ್ಷದ ಅವಧಿಯಲ್ಲಿ ನನಗೆ ನಿಡಿ-33ರ ಬಗ್ಗೆ ಗೊತ್ತಿತ್ತು ಎಂದರೆ

ನನ್ನ ತಾತ ಆ ಬಗ್ಗೆ ಹೇಳಿಲ್ಲ. ನಾಚೇರಮ್ಮರವರು ತಮ್ಮೇಗೌಡರ ಹೆಂಡತಿ ಎಂದು ತೋರಿಸಲು ನಿಡಿ-33ನ್ನು ಹೊರತುಪಡಿಸಿ ಬೇರೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ತಮ್ಮಣ್ಣೇಗೌಡರಿಗೆ ಸುಬ್ಬಮ್ಮ ಒಬ್ಬರೇ ಪತ್ನಿ ಎಂದರೆ ಸರಿಯಲ್ಲ. ತಮ್ಮಣ್ಣೇಗೌಡ ಮತ್ತು ಸುಬ್ಬಮ್ಮರವರಿಗೆ ಒಬ್ಬರೇ ಮಗ ಎಂದರೆ ಸರಿಯಲ್ಲ. ತಮ್ಮಣ್ಣೇಗೌಡ ಮತ್ತು ಸುಬ್ಬಮ್ಮರವರಿಗೆ ಯಾವುದೇ ಸಂಬಂಧ ಇಲ್ಲ.

ನಿಡಿ-33ರನ್ನು ಹಾಜರುಪಡಿಸುವ ಕಾಲಕ್ಕೆ ಆ ದಾಖಲೆ 2ನೇ ಪ್ರತಿವಾದಿಯ ಬಳಿ ಇತ್ತು. ನಿಡಿ-33ಕ್ಕೆ ಯಾರೆಲ್ಲ ಸಾಕ್ಷಿ ಸಹಿ ಹಾಕಿದ್ದಾರೆ ಎಂದು ಗೊತ್ತಿಲ್ಲ. ನಿಡಿ-33ನ್ನು ಗೋವಿಂದೇಗೌಡ ಎನ್ನುವವರು ಬರೆದಿದ್ದಾರೆ. ಅವರು ಯಾವ ಊರಿನವರು ಎಂದು ಗೊತ್ತಿಲ್ಲ. ನನಗೆ ಓದಲು ಬರೆಯಲು ಬರುತ್ತದೆ. ನಿಡಿ-33ನ್ನು ಓದಿ ಹಾಜರುಪಡಿಸಿದ್ದೇನೆ. ನಿಡಿ-33ರ ದಾಖಲೆ ಎಲ್ಲಿಯೂ ಹರಿದಿಲ್ಲ. ಅದು ಕೊಳೆಯಾಗಿದೆ. ನಿಡಿ-33ರಲ್ಲಿರುವ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಲು ತೊಂದರೆ ಇಲ್ಲಾ ಎಂದರೆ ಅವರು ಬದುಕಿದ್ದಾರೆಯೇ ಇಲ್ಲವೇ ಗೊತ್ತಿಲ್ಲ. ಸದರಿ ಸಾಕ್ಷಿದಾರರು ಬದುಕಿಲ್ಲ ಎಂದು ತೋರಿಸಲು ಮರಣ ಪ್ರಮಾಣ ಪತ್ರ ಹಾಜರುಪಡಿಸಿಲ್ಲ. ನಾಚೇರಮ್ಮ ಎಂಬುವವರು ತಮ್ಮಣ್ಣೇಗೌಡರ ಪತ್ನಿ ಅಲ್ಲ ಎಂದರೆ ಸರಿಯಲ್ಲ. ಈ ಕೇಸಿಗೋಸ್ಕರ ನಿಡಿ-33ನ್ನು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ತಮ್ಮಣ್ಣೇಗೌಡರಿಗೆ ತಿಮ್ಮೇಗೌಡ ಒಬ್ಬರೇ ಮಗನಾಗಿದ್ದು ಅವರ ಆಸ್ತಿಗಳನ್ನು ಕಬಳಿಸಬೇಕೆಂದು ಸೋಮೇಗೌಡರ ಮಕ್ಕಳಾದ ನಾವು ನಿಡಿ-33ನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. 1952ರಲ್ಲಿ ನಿಡಿ-33ರ ದಾಖಲೆ ಬರವಣಿಗೆಯಾಗಿಲ್ಲ ಎಂದರೆ ಸರಿಯಲ್ಲ. ನಿಡಿ-33ರ ದಾಖಲೆ ಆಸ್ತಿತ್ವದಲ್ಲಿ ಇದ್ದಿದ್ದರೆ ಪ್ರತಿವಾದ ಪತ್ರದಲ್ಲಿ ಬರೆಸುತ್ತಿದ್ದೆವು ಎಂದರೆ ಸರಿಯಲ್ಲ.

ನಾಚೇರಮ್ಮರವರು ತಮ್ಮಣ್ಣೇಗೌಡರ ಪತ್ನಿ ಎಂದು ತೋರಿಸಲು ಊರಿನಲ್ಲಿ ಯಾರು ಬದುಕಿಲ್ಲ. ತಮ್ಮಣ್ಣೇಗೌಡರ ಸಂಸಾರವನ್ನು ನೋಡಿದವರೂ ಊರಿನಲ್ಲಿ ಲಭ್ಯವಿದ್ದ್ರೂ ಕೂಡ ಅವರನ್ನು ಸಾಕ್ಷಿ ವಿಚಾರಣೆಗಗೆ ಒಳಪಡಿಸಿದರೆ ನಾಚೇರಮ್ಮ ಅವರ ಪತ್ನಿ ಅಲ್ಲ ಎಂಬ ಸತ್ಯಾಂಶ ಹೊರ ಬರುತ್ತದೆ ಎಂದು ಆ ವಯಸ್ಸಿನವರು ಯಾರು ಲಭ್ಯವಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾಚೇರಮ್ಮ ತಮ್ಮಣ್ಣೇಗೌಡರ ಎರಡನೇ ಪತ್ನಿ ಎಂದು ಕಟ್ಟುಕಥೆ

ಕಟ್ಟುತ್ತಿದ್ದೇನೆ ಎಂದರೆ ಸರಿಯಲ್ಲ. ತಮ್ಮಣ್ಣೇಗೌಡರ ಮೊದಲನೇ ಪತ್ನಿಯ ಹೆಸರು ಸಣ್ಣತಾಯಮ್ಮ ಉಃ ಪುಟ್ಟತಾಯಮ್ಮ. ಸದರಿ ವಿಚಾರವನ್ನು ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿಲ್ಲ. ತಮ್ಮಣ್ಣೇಗೌಡರಿಗೆ ಸುಬ್ಬಮ್ಮ ಮಾತ್ರ ಪತ್ನಿ ಎಂದರೆ ಸರಿಯಲ್ಲ. ಅವರಿಗೆ ಸಣ್ಣತಾಯಮ್ಮ ಉಃ ಪುಟ್ಟತಾಯಮ್ಮ ಮತ್ತು ನಾಚೀರಮ್ಮ ಎಂಬ ಇಬ್ಬರು ಪತ್ನಿಯರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.